

ಮನೆಗೆ ಹೋಗಿ, ಮಗನಿಗಾಗಿ ಮೇಜಿನ ಬಳಿ ಕೂತ. ಸ್ವಲ್ಪ ಹೊತ್ತಲ್ಲಿ, ಯಥಾಪ್ರಕಾರ ಎಂಥದೋ ಸಂದೇಶ ಹೊತ್ತು ಎಲ್ಲೋ ಹೋಗಿದ್ದ ಅಲ್ಯೋಷ ಏದುಸಿರು ಬಿಡುತ್ತ ಬಂದ.

'ನೀನು ಒಳ್ಳೆ ಸಭ್ಯಸ್ಥ ಅಂತ ಮಾಡಿದ್ದೆ, ಆದರೆ ನಿನ್ನ ತಲೇಲಿ ಇಂಥ ಕೆಟ್ಟ ಯೋಚನೆ ಹ್ಯಾಗೆ ಬಂತೂಂತ' ಅನ್ನುವ ಮಾತುಗಳಿಂದ ತಂದೆ ಅಲ್ಯೋಷನನ್ನು ಬರಮಾಡಿಕೊಂಡ.

'ನಾನೇನೂ ಅಂಥದ್ದನ್ನ ಮಾಡಿಲ್ಲವಲ್ಲ!'

'ಏನೂ ಮಾಡಿಲ್ಲವಾ? ಮದುವೆಯಾಗಕ್ಕೆ ನಿರ್ಧಾರ ಮಾಡಿಬಿಟ್ಯಾ? ಸಮಯ ಬಂದಾಗ ನನಗೆ ಇಷ್ಟವಾಗೋ ಹುಡುಗಿ ಜೊತೇಲಿ ನಾನೇ ನಿನ್ನ ಮದುವೆ ಮಾಡ್ತೀನಿ, ಆದ್ರೆ ಪಟ್ಟಣದ ಕುಲಗೆಟ್ಟೋಳ ಜೊತೆ ಅಲ್ಲ.' ಜೊತೇಲಿ ಇಂಥದೇ ಇನ್ನೂ ಏನೇನೋ ಹೇಳಿದ. ಅಲ್ಯೋಷ ಮಾತಾಡದೆ ನಿಂತು ನಿಟ್ಟುಸಿರು ಬಿಟ್ಟ. ತಂದೆ ಮಾತು ನಿಲ್ಲಿಸಿದಾಗ ಇವನು ಅವನ ಕಡೆ ನೋಡಿ ಮುಗುಳ್ನಕ್ಕ. 'ನಾನು ಅದನ್ನೆಲ್ಲ ಮರ್ತುಬಿಡ್ತೀನಿ ಬಿಡಪ್ಪ!' ಅಂದ.

'ಸರಿಯಾದ್ದನ್ನೇ ಮಾಡು' ಎಂದು ಚಿಕ್ಕದಾಗಿ ಹೇಳಿ ತಂದೆ ಊರ ಕಡೆ ಹೊರಟ.

ತಂದೆ ಹೋದ ಮೇಲೆ, ಮರೆಯಲ್ಲಿ ನಿಂತು ಅಪ್ಪಮಗನ ಮಧ್ಯದ ಮಾತುಗಳನ್ನು ಕೇಳಿಸಿಕೊಳ್ತಿದ್ದ ಉಪ್ಪಿಂಜಳ ಜೊತೆ ಒಬ್ಬನೇ ಇದ್ದಾಗ ಅಲ್ಯೋಷ ಅವಳಿಗೆ ಹೇಳಿದ: 'ನಮ್ಮ ಯೋಚನೆ ನಡೆಯೋದಿಲ್ಲ. ಕೇಳಿಸ್ತಾ? ಅಪ್ಪನಿಗೆ ಭಾರಿ ಕೋಪ, ನಮ್ಮನ್ನು ಮದುವೆ ಆಗಕ್ಕೆ ಬಿಡಲ್ಲ.'

ಉಪ್ಪಿಂಜ ತನ್ನ ಏಪ್ರನ್‌ನಿಂದ ಬಾಯಿ ಮುಚ್ಚಿಕೊಂಡು ನಿಶ್ಶಬ್ದವಾಗಿ ಅಳತೊಡಗಿದಳು. ಅಲ್ಯೋಷ ಲೊಚಗುಟ್ಟುತ್ತ, 'ಅಪ್ಪನ ಮಾತನ್ನ ನಾನು ಹ್ಯಾಗೆ ಮೀರ್ಲಿ? ಇಲ್ನೋಡು, ನಾವಿದನ್ನೆಲ್ಲ ಮರ್ತುಬಿಡೋಣ.'

ಸಾಯಂಕಾಲ ವ್ಯಾಪಾರಿಯ ಹೆಂಡತಿ ಅಂಗಡಿ ಬಾಗಿಲು ಮುಚ್ಚೋದಕ್ಕೆ ಕರೆದಾಗ ಅವಳು ಹೇಳಿದಳು: 'ನೀನು ನಿಮ್ಮಪ್ಪ ಹೇಳಿದ ಹ್ಯಾಗೆ ಮದುವೆ ಗಿದುವೆ ಯೋಚ್ನೇನೆಲ್ಲ ಬಿಟ್ಬಿಡ್ತೀ ತಾನೇ?'

'ಖಂಡಿತ, ಅದನ್ನಾಗ್ಲೇ ನಾನು ಮರೆತೆ!' ಎಂದು ಅಲ್ಯೋಷ ತಟ್ಟನೆ ಹೇಳಿದ. ಹಾಗಂದು ಮುಗುಳ್ನಕ್ಕ, ಆದರೆ ಆಮೇಲೆ ಮುಸುಮುಸು ಅಳತೊಡಗಿದ.

ಆ ಹೊತ್ತಿನಿಂದ ಅಲ್ಯೋಷ ಮತ್ತೆ ಉಪ್ಪಿಂಜಳ ಜೊತೆ ಮದುವೆಯ ಬಗ್ಗೆ ಎಂದೂ ಮಾತಾಡಲಿಲ್ಲ, ಆ ಹಿಂದಿನಂತೆಯೇ ಇರತೊಡಗಿದ.

ಲೆಂಟ್ ಅವಧಿಯಲ್ಲಿ ಒಂದು ದಿನ ಬೆಳಿಗ್ಗೆ ವ್ಯಾಪಾರಿಯ ಕಾರಕೂನ ಮಾಳಿಗೆ ಮೇಲಿನ ಹಿಮವನ್ನು ಗುಡಿಸಿ ಹಾಕಲು ಅಲ್ಯೋಷನನ್ನು ಕಳಿಸಿದ. ಅವನು ಮೇಲಕ್ಕೆ ತೆವಳುತ್ತ ಹತ್ತಿದ, ಸಲಿಕೆಯಿಂದ ಹಿಮವನ್ನೆಲ್ಲ ತೆಗೆದುಹಾಕಿ, ಚರಂಡಿಯ ಹತ್ತಿರದಲ್ಲಿ ಹೆಪ್ಪುಗಟ್ಟಿದ್ದ ಹಿಮವನ್ನು ಒಡೆಯಲು ತೊಡಗಿದ. ಅಲ್ಲಿ ಕಾಲುಜಾರಿದ ಅಲ್ಯೋಷ ಸಲಿಕೆಯ ಜೊತೆಗೆ ಕೆಳಕ್ಕೆ ದೊಪ್ಪನೆ ಬಿದ್ದ. ಅವನ ದುರದೃಷ್ಟ, ಅವನು ಬಿದ್ದದ್ದು ಹಿಮದ ಮೇಲಲ್ಲ, ಕಬ್ಬಿಣದ ಕಂಬಿಗಳಿದ್ದ ಮೋರಿಯ ಬಾಯಲ್ಲಿ. ಉಪ್ಪಿಂಜ ಅವನ ಬಳಿಗೆ ಓಡಿ ಹೋದಳು, ಅವಳ ಹಿಂದೆ ವ್ಯಾಪಾರಿಯ ಮಗಳೂ ಓಡಿದಳು.

'ಅಲ್ಯೋಷ, ತುಂಬ ಪೆಟ್ಟಾಯಿತಾ?'

'ಹ್ಞೂ, ಆದ್ರೂ ಪರವಾಯಿಲ್ಲ ಅದೇನು ಮಹಾ.'

ಅವನೇನೋ ಮೇಲೇಳಲು ಬಯಸಿದ, ಆದರೆ ಅವನಿಂದಾಗಲಿಲ್ಲ, ಬರೀ ಮುಗುಳ್ನಕ್ಕ. ಬೇರೆಯವರೂ ಬಂದು ಅವನನ್ನು ಅನಾಮತ್ತಾಗಿ ಮನೆಯಂಗಳಕ್ಕೆ ಹೊತ್ತು ಸಾಗಿಸಿದರು. ಆಸ್ಪತ್ರೆಯಿಂದ ಒಬ್ಬ ಆರ್ಡರ್ಲಿಯೂ ಬಂದು ಅವನನ್ನು ಪರೀಕ್ಷಿಸಿ ಎಲ್ಲಿ ಪೆಟ್ಟಾಗಿದೆಯೆಂದು ವಿಚಾರಿಸಿದ. 'ಎಲ್ಲ ಕಡೆ ನೋಯ್ತಿದೆ' ಎಂದುತ್ತರಿಸಿದ ಅಲ್ಯೋಷ. 'ಆದರೆ ಅದೇನು ಮಹಾ ಬಿಡಿ, ಯಜಮಾನರಿಗೆ ತುಂಬ ಕಸಿವಿಸಿ ಆಗತ್ತೆ, ಅಪ್ಪನಿಗೆ ವಿಷಯ ತಿಳಿಸಬೇಕು.'

ಅವನು ಎರಡು ದಿನ ಪೂರ್ತಿ ಮಲಗಿರಬೇಕಾಯಿತು. ಮೂರನೆಯ ದಿನ ಪುರೋಹಿತರಿಗೆ ಹೇಳಿಕಳಿಸುವ ಏರ್ಪಾಟಾಯಿತು.

'ನೀನು ಸತ್ತೇ ಹೋಗ್ತೀಯಾ?' ಎಂದು ಕಳವಳದಿಂದ ಉಪ್ಪಿಂಜ ಕೇಳಿದಳು.

'ಯಾರೂ ಯಾವಾಗ್ಲೂ ಬದುಕಿರಲ್ಲವಲ್ಲ. ಯಾವಾತ್ತಾದರ್ರೂ ಸಾಯಬೇಕಲ್ಲ' ಅಂದ ತಕ್ಷಣವೇ ಎಂದಿನಂತೆ. 'ಥ್ಯಾಂಕ್ಯು, ಉಪ್ಪಿಂಜ. ನಂಗೋಸ್ಕರ ದುಃಖ ಪಡ್ತಿರೋದಕ್ಕೆ. ನಮ್ಮ ಮದುವೆಗೆ ಯಾರೂ ಒಪ್ಪದೇ ಇದ್ದದ್ದೇ ಒಳ್ಳೇದಾಯ್ತು; ಮದುವೆ ಆಗಿದ್ರೂ ಏನೂ ಪ್ರಯೋಜನವಾಗ್ತಾ ಇರ್ಲಿಲ್ಲ. ಈಗೆಲ್ಲ ಸರಿಯಾಯ್ತು.'

ಪುರೋಹಿತರ ಜೊತೆಗೆ ಅವನು ಪ್ರಾರ್ಥನೆ ಸಲ್ಲಿಸಿದ, ಆದರೆ ಕೈಜೋಡಿಸಿ ಮನಸ್ಸಿನಲ್ಲೇ. ಇಲ್ಲಿ ತಾನು ಒಳ್ಳೆಯವನಾಗಿದ್ದಿದ್ರೆ, ವಿಧೇಯನಾಗಿದ್ದುಕೊಂಡು ಯಾರಿಗೂ ನೋವುಂಟುಮಾಡದೇ ಇದ್ದಿದ್ರೆ, ಅಲ್ಲಿಯೂ ಒಳ್ಳೇದೇ ಆಗತ್ತೆ ಎಂದು ಅವನ ಮನದಾಳ ನುಡಿಯುತ್ತಿತ್ತು. ಹೆಚ್ಚು ಮಾತಾಡಲಿಲ್ಲ. 'ಕುಡಿಯುವುದಕ್ಕೆ ಏನಾದರೂ ಬೇಕು' ಅಂತ ಕೇಳಿದ, ಆಮೇಲೆ ಆಶ್ಚರ್ಯಕರವಾಗಿ ಮುಗುಳ್ನಕ್ಕ. ಅವನಿಗೆ ಯಾವುದರ ಬಗ್ಗೆಯೋ ವಿಸ್ಮಯ ಉಂಟಾದಂತೆ ತೋರಿತು, ಕೈಚಾಚಿದ, ಪ್ರಾಣ ಹಾರಿಹೋಗಿತ್ತು. ■